ದಿನಾಂಕ 17.07.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ.ಬಿ ಜಿ ವಕೀಲರಿಂದಃ

ವಾದಿಯವರು ಯಾವ ಪರಿಹಾರ ಕೋರಿ ದಾವೆ ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. 1ನೇ ಪ್ರತಿವಾದಿ ಜೀವಾಂತ ಇದ್ದಾರೆ. ಅವರು ನನ್ನ ಅಜ್ಜಿ. 2ನೇ ಪ್ರತಿವಾದಿ ನನ್ನ ತಾಯಿ. 4 ಮತ್ತು 5 ನೇ ಪ್ರತಿವಾದಿಯವರು ನನ್ನ ಸಹೋದರಿಯವರು. ನಾನು 7ನೇ ತರಗತಿ ಓದಿದ್ದೇನೆ. 4 ಮತ್ತು 5 ನೇ ಪ್ರತಿವಾದಿಯವರು 10 ನೇ ತರಗತಿ ಓದಿದ್ದಾರೆ. ದಾವಾ ಸ್ವತ್ತು ಮೂಲ 1ನೇ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೇ ಹೌದು. ವಾದಿಗೆ ಸ್ವಾ ಧೀನ ರಹಿತ ಕ್ರಯ ಕರಾರು ಬರೆದುಕೊಡುವ ಪೂರ್ವದಲ್ಲಿ ದಾವಾ ಸ್ವತ್ತನ್ನು ದಿ 08.10.2020 ರಲ್ಲಿ ಚಿಕ್ಕೋಣ್ಣನ್ನ ರವರ ಮಗ ದಾಸೇಗೌಡನ ದೊಡ್ಡಿ ಶಿವಣ್ಣನಿಗೆ ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಹೌದು. ಅವರಿಗೂ ಸಹ ದಾವಾ ಸ್ವತ್ತಿನ 11 ಮುಕ್ಕಾಲು ಗುಂಟೆಯನ್ನು ಕರಾರು ಪತ್ರದ ಮೂಲಕ ಬರೆದುಕೊಟ್ಟಿದ್ದೇವೆ.

2. ಸದರಿ ಕರಾರು ಪತ್ರವನ್ನು ನಾವುಗಳು ದಿ 10.12.2021 ರಲ್ಲಿ ರದ್ದು ಗೊಳಿಸಿದ್ದೇವೆ ಎಂದರೇ ಹೌದು. ಆಗ ಸಮಯ ಬೆಳಿಗ್ಗೆ 11.56 ಆಗಿತ್ತು ಎಂದರೆ ಹೌದು. ಕರಾರನ್ನು ರದ್ದು ಪಡಿಸಿದ ದಿನ 4 ಲಕ್ಷಕ್ಕೆ ಬರೆದುಕೊಟ್ಟು 3 ಲಕ್ಷ ಪಡೆದುಕೊಂಡಿದ್ದೇವೆ ಎಂದರೇ ಹೌದು. ಅದೇ ದಿನ 3 ಲಕ್ಷ ಹಣವನ್ನು ವಾಪಸ್ಸು ಕೊಟ್ಟಿದ್ದೇವೆ ಎಂದರೇ ಹೌದು. ದಿ 10.12.2021 ರಂದು ಶಿವಣ್ಣರಿಗೆ ಬರೆದುಕೊಟ್ಟ ನೋಂದಾಯಿತ ಕ್ರಯ ಕರಾರನ್ನು ರದ್ದು ಪಡಿಸಿ ಅದೇ ದಿನ ವಾದಿಗೆ ನೋಂದಾಯಿತ ಕ್ರಯ ಕರಾರು ಪತ್ರವನ್ನು ಬರೆದುಕೊಟ್ಟಿದ್ದೇವು ಎಂದರೇ ಹೌದು. ಆ ಕ್ರಯ ಕರಾರರು ಪತ್ರಕ್ಕೆ ನಾನು , ವಾದಿ 1, 2 ಮತ್ತು 4, 5 ನೇ ಪ್ರತಿವಾದಿಗಳು ಸಹಿ ಮಾಡಿದ್ದಾರೆ ಎಂದರೇ ಹೌದು. ಅದೇ ದಿನ ನಿಪಿ-1 ರ ಮೇಲೆ ನಮ್ಮ ಚಯಾ ಚಿತ್ರ ಹಾಗೂ ಹೆಬ್ಬಿಟ್ಟಿನ ಗುರುತನ್ನು ಪಡೆದ್ದಾರೆ ಎಂದರೇ ಹೌದು. ನಿಪಿ-1 ರಂತೆ ನಾವು ರೂ.7,64,000/- ಕ್ಕೆ ಮಾತಾನಾಡಿ 5 ಲಕ್ಷಹಣವನ್ನು

ಮುಂಗಡವಾಗಿ ಪಡೆದಿದ್ದೀ ಎಂದರೇ ಹೌದು. ಅದಕ್ಕೆ ಸಾಕ್ಷಿಯಾಗಿ ಶಿವಕುಮಾರ್ ಮತ್ತು ರಾಜೀವ್ ಎಂ ಡಿ ರವರು ಸಹಿ ಮಾಡಿದ್ದಾರೆಂದರೇ ಹೌದು. ಅದರಿ ಕರಾರನಲ್ಲಿ 5 ತಿಂಗಳ ವಾಯಿದೆ ಇತ್ತು ಎಂದರೇ ಹೌದು. 5 ತಿಂಗಳಲ್ಲಿ ಬರೆದುಕೊಡದ ಕಾರಣ ದಿ 07.06.2022 ರಂದು ನೋಟೀಸ್ ಕೊಟ್ಟಿದ್ದರೆ ಎಂದರೇ ಹೌದು. ಆ ನೋಟೀಸ್ ಗೆ ನಾವು ಉತ್ತರ ಕೊಡಿಸಿರುವುದಿಲ್ಲ. ಆ ನೋಟೀಸ್ ಗೆ ಉತ್ತರ ಕೊಡಲು ತೊಂದರೆ ಇತ್ತ ಎಂದರೇ ಹೌದು. ಏನು ತೊಂದರೆ ಇತ್ತ ಎಂದರೇ ಸಾಕ್ಷಿ 1ನೇ ಪ್ರತಿವಾದಿಗೆ ಆರೋಗ್ಯ ಸರಿ ಇರಲಿಲ್ಲ ಎಂದು ಹೇಳುತ್ತಾರೆ. ಉಳಿದವರಿಗೆ ತೊಂದರೆ ಇತ್ತ ಎಂದರೇ ಅವರಿಗೆ ಗೊತ್ತಾಗಿರುವುದಿಲ್ಲ. ನಿಮ್ಮ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆ ಯಲ್ಲಿ ನೋಟೀಸ್ ಗೆ ಉತ್ತರ ನೀಡಲು ತೊಂದರೇ ಇತ್ತು ಎಂದು ಹೇಳಿದ್ದೀರ ಎಂದರೇ ಇಲ್ಲ.

3. ಸಾಲ ಅಥವಾ ಬಡ್ಡಿ ವಿಚಾರವಾಗಿ ಹಣ ಪಡೆದುಕೊಂಡಿದ್ದೇವು ಎಂದು ನಿಮ್ಮ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆ ಯಲ್ಲಿ ಇದೆಯಾ ಎಂದರೇ ಓದಿಲ್ಲ. ಆ ಒಕ್ಕಾಣೆ ನಿಪಿ-1 ರಲ್ಲಿ ಇದೆಯಾ ಎಂದರೇ ನೋಡಿಲ್ಲ. 4 ತಿಂಗಳ ಆದ ನಂತರ ವಾದಿಗೆ ನೋಟಿಸ್ ಕೊಡುವುದಾಗಲಿ ಕರಾರನ್ನು ರದ್ದು ಪಡಿಸುವುದಾಗಿಲಿ ಮಾಡಿದ್ದೀರಿ ಎಂದರೆ ಇಲ್ಲ. ಸರ್ವೆ ನಂ 276/2 ಎ ಗೆ ಬರುವುದಿಲ್ಲ ಬದಲು ಸರ್ವೆ ನಂ 276/2ಬಿ ಗೆ ಬರುತ್ತದೆ ಎಂದು ತೋರಿಸಲು ನಕ್ಷೆಯನ್ನು ಹಾಜರುಪಡಿಸಿದ್ದೀರಿ ಎಂದರೇ ಹೌದು. ಸಾಕ್ಷಿಗೆ ತಾನು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ ನಕ್ಷೆ ಇದೆಯಾ ಎಂದು ಕೇಳಲಾಗಿ ಸಾಕ್ಷಿ ದಾಖಲೆಗಳನ್ನು ಪರಿಶೀಲಿಸಿ ಇಲ್ಲ ಎಂದು ಉತ್ತರಿಸಿರುತ್ತಾರೆ.

4. ಮಹಜರ್ ಆದ ನಂತರ ಸರ್ವೆ ನಂಬರು ಬದಲಾವಣೆ ಆಗಿ ಪೋಡಿ ರದ್ದಾಗಿ ಅದೇ ಸರ್ವೆ ನಂಬರು ಕೂತ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೀರಿ ಎಂದರೇ ಇಲ್ಲ. ಇವತ್ತು ಸಹ ಅದು ಸರ್ವೆ ನಂ 276/2ಎ ಬರುತ್ತಿದೆ ಎಂದರೇ ಹೌದು. ವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವುದಾಗಿ ಬರೆದುಕೊಟ್ಟ ದಾಖಲೆ ಕರಾರು ಪತ್ರ ಆಗಿದ್ದು ಹಣದ ಭದ್ರತೆಗಾಗಿ ಅಲ್ಲ. ಅದರು ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ. ದಾವಾ ಸ್ವತ್ತಿನ ಚಕ್ಕು ಬಂದಿ ಪೂರ್ವಕ್ಕೆ-ಅಲುಮೇಲಮ್ಮ ರವರ ಜಮೀನು, ಪಶ್ಚಿಮಕ್ಕೆ - ಜಯಮ್ಮರವರ ಜಮೀನು, ಉತ್ತರಕ್ಕೆ-ರಸ್ತೆ, ದಕ್ಷಿಣಕ್ಕೆ-ಪುಟ್ಟತಾಯಮ್ಮರವರ ಜಮೀನು ಎಂದರೇ ಹೌದು. ಇವತ್ತಿಗೂ

ಸಹ 11 ಮುಕ್ಕಾಲು ಗುಂಟೆ ನಮ್ಮ ಸ್ವಾ ಧೀನದಲ್ಲಿದೆ ಎಂದರೇ ಹೌದು. ವಾದಿಗೆ ಬರೆದುಕೊಟ್ಟ ಕರಾರು ಪತ್ರವನ್ನು ಅನುಷ್ಠಾನ ಮಾಡಬೇಕಾಗುತ್ತದೆ ಎಂದು ಹೇಳಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾ ಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)